ಶ್ರೀ ಎ. ಎ. ದೇಸಾಯಿ.—ನಮ್ಮ ತಾಲ್ಲೂಕಿನಲ್ಲಿ ಎಷ್ಟೇ ಕೆಲಸಗಳನ್ನು ತೆಗೆದುಕೊಂಡಾಗ್ಲೂ ಇನ್ನೂ ಸಾಕಷ್ಟು ಸ್ಕೇರ್ಸಿಟಿ ಇರುತ್ತದೆ. ಟ್ಯಾಂಕ್ ವರ್ಕ್ಸ್ ಎಲ್ಲಿ ತೆಗೆದುಕೊಂಡಿಲ್ಲವೋ ಅಲ್ಲಿ ಸ್ಕೇರ್ಸಿಟಿ ಇರುವುದರಿಂದ, ಅಂತಹ ಕಡೆಗಳಲ್ಲಿ ಕೂಡಲೇ ಟ್ಯಾಂಕ್‌ವರ್ಕ್ಸ್ ತೆಗೆದುಕೊಳ್ಳುವುದಕ್ಕೆ ಆಜ್ಞೆ ಮಾಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ ಈಗಾಗಲೇ ನಾನು ಹೇಳಿದಹಾಗೆ ಅಲ್ಲಿ ಪಂಗರ್‌ಕೇನ್ ಮತ್ತು ರಬಿ ಕ್ರಾಪ್ಸ್ ಬೆಳೆಮಾಡುವ ಕೆಲಸ ನಡೆಯುತ್ತಿದೆ ಇದರಿಂದ ಕೃಷಿ ಕಾರ್ಮಿಕರಿಗೆ ಕೆಲಸ ದೊರಕಿದೆಯೆಂದು ವರದಿ ಬಂದಿದೆ ಲೇಟೆಸ್ಟ್ ವರದಿ ತರಿಸಿಕೊಂಡು ಯಾರಿಗೆ ಕೆಲಸವಿಲ್ಲವೋ ಅಂತಹವರಿಗೆ ಉದ್ಯೋಗ ಅವಕಾಶ ದೊರಕಿಸಲಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ರೆವಿನ್ಯೂ ಅಧಿಕಾರಿಗಳಿಗೆ ತಿಳಿಸಿದೆ. ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಮಾನ್ಯ ಸದಸ್ಯರ ಸಲಹೆಯಂತೆ ಮಾಡೋಣ.

(*vi*) *re: misappropriation of sums in the agricultural Produce Marketing Committee, Tiptur.*

SRI T. M. MANJUNATH (Tiptur).—I call the attention of the Mininter for Co-operation to the misappropriation of Rs. 5,15,000 in the Agricultural Produce Marketing Committee, Tiptur.

SRI K. H RANGANATH (Minister for Co-operation) —Sir, I wish to make the following statement.

There has been no misappropriation of Rs. 5,15,000 either by the Secretary or the Chairman of the Agricultural Produce Market Committee, Tiptur.

The Committee have, however, deposited Rs. 5,15 lakhs out of its surplus funds with a Commercial Bank.

ಶ್ರೀ ಟಿ. ಎಂ. ಮಂಜುನಾಥ್ —ಈಗಾಗಲೇ ಸರ್ಕಾರದವರು ತನಿಖೆಮಾಡಿ ಅಲ್ಲಿರತಕ್ಕ ಕಾರ್ಯದರ್ಶಿ ರಾಜೀನಾಮೆ ಪಡೆದಿದ್ದಾರೆಂದು ಸಸ್‌ಪೆನ್ಷನ್‌ನಲ್ಲಿಟ್ಟಿದ್ದಾರೆ. ಈ ಒಂದು ತುರ್ತು ಪರಿಸ್ಥಿತಿಯಲ್ಲಿ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿದ್ದಾರೆಂದು ತಿಳಿದುಬಂದರೂ ಮಾರ್ಕೆಟ್ ರೂಲ್ಸ್ ಆಕ್ಟ್ ಪ್ರಕಾರ ಅನುಸರಿಸದೇ ಸರ್ಕಾರದ ಅಧಿಕಾರಿಗಳಾಗಿ ಇರತಕ್ಕ ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರ ಕನ್‌ಕರೆನ್ಸ್ ತೆಗೆದುಕೊಳ್ಳದೆ, ಯಾವ ಒಂದು ಮೀಟಿಂಗ್ ಸಹ ನಡೆಯಿಸದೆ, ಮತ್ತು ಯಾವ ಒಂದು ರಿಜಲ್ಯೂಷನ್ ಮಾಡದೆ ಇಂತಹ ಅನ್ಯಾಯವನ್ನು ಮಾಡಿದ್ದಾರೆ ಅಲ್ಲಿ ಚೇರ್‌ಮನ್ ಯಾರು ಇದ್ದಾರೆಯೋ ಅವರು ಮತ್ತು ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರು ನ್ಯಾಯವಾಗಿ ಹೋಗದೆ ಬ್ಯಾಂಕಿನ ಹಣವನ್ನು ಒಂದೇ ದಿವಸ ತೆಗೆದು ಕರ್ನಾಟಕ ಬ್ಯಾಂಕಿನಲ್ಲಿ ಇಡುವ ಅವಶ್ಯಕತೆ ಏನಿತ್ತು? ಇದರ ಬಗ್ಗೆ ಸರ್ಕಾರ ಏನಾದರೂ ಹುಕುಂ ಕೊಟ್ಟಿತ್ತೇ ಅಥವಾ ಮಾರ್ಕೆಟಿಂಗ್ ಬೈಲಾಗಳಲ್ಲಿ ಏನಾದರೂ ನಿಯಮ ಮಾಡಿದ್ದಾರೆಯೇ?

ಶ್ರೀ ಕೆ. ಎಚ್. ರಂಗನಾಥ್ —ಮಾನ್ಯ ಸದಸ್ಯರು ಹಣ ಮಿಸ್‌ಅಪ್ರೋಪ್ರಿಯೇಷನ್ ಆಗಿದೆಯೆಂದು ಹೇಳಿದ್ದಾರೆ ಆ ರೀತಿಯಾಗಿಲ್ಲವೆಂದು ನಾನು ಹೇಳಿದ್ದೇನೆ ಮಾರ್ಕೆಟ್ ಕಮಿಟಿಯಲ್ಲಿ ಸುಮಾರು 20 ಲಕ್ಷ ರೂಪಾಯಿಗಳಷ್ಟು ಸರ್ಪ್ಲಸ್ ಹಣವಿತ್ತು. ಮಾರ್ಕೆಟ್ ಕಮಿಟಿಯವರು ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರಿಗೆ 30ನೇ ಡಿಸೆಂಬರ್ 1975ರಲ್ಲಿ ನಮ್ಮಲ್ಲಿ ಸರ್ಪ್ಲಸ್ ಹಣವಿದೆ,ಅದನ್ನು ಯಾವುದಾದರೂ ಪೆಡ್ಯೂಲ್ ಬ್ಯಾಂಕ್‌ನಲ್ಲಿಟ್ಟರೆ ಪೆಚ್ಚು ಬಡ್ಡಿ ಬರುತ್ತದೆ ಎಂದು ಆ ಹಣವನ್ನು ಇಟ್ಟಿದ್ದಕ್ಕೆ ಒಂದು ಪತ್ರ ಬರೆದಿದ್ದಾರೆ 30ನೇ ಡಿಸೆಂಬರ್ 1975ರಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯವರು ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರಿಗೆ ನಮಗೆ ಪರ್ಮಿಷನ್ ಕೊಡಿ ಎಂಬುದಾಗಿ ಪತ್ರ ಬರೆದಿದ್ದಾರೆ. ಅದಕ್ಕೆ ಅವರು ಅದನ್ನು ಪ್ರಾಪರ್ ಚಾನಲ್ ಮೂಲಕ ಕಳಿಸಿಸಿ ಎಂಬುದಾಗಿ ಹೇಳಿದ್ದಾರೆ. ಈ ವಿಷಯ 30ನೇ ಡಿಸೆಂಬರ್ 1975ರಲ್ಲಿ ಇಷ್ಟು 20 ಲಕ್ಷ ರೂಪಾಯಿಗಳ ವ್ಯವಹಾರ ಮಾಡುವಾಗ ಡಿ.ಸಿ.ಸಿ. ಬ್ಯಾಂಕ್‌ನಿಂದ ಸೇಕಡ 6ರಷ್ಟು ಬಡ್ಡಿ ಬರುತ್ತಿದ್ದುದನ್ನು ತಪ್ಪಿಸಿ ಕರ್ನಾಟಕ ಬ್ಯಾಂಕಿನಲ್ಲಿ ಹಣ ಇಟ್ಟಿದ್ದಾರೆ. ಆದರಿಂದ

ಸೇಕಡ 10ರಷ್ಟು ಬಡ್ಡಿ ಬರಂತ್ತದೆ. ಆದರೆ ಸಾಕಷ್ಟು ಹಣ ಬ್ಯಾಂಕಿನ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಬ್ಯಾಂಕಿನಲ್ಲಿದೆ. ಕಮಿಟಿಯವರು ಏನು ಮಾಡಿದ್ದಾರೆಂದರೆ, it is a very small omission on the part of the management in not getting the permission before putting the money in the Bank. They had written a letter to the Chief Marketing Officer for permission. But before getting the sanction, they had deposited the money in the Bank. 7ನೇ ಜನವರಿ 1976 ರಂದು ಚೀಫ್ ಮಾರ್ಕೆಟಿಂಗ್ ಆಫೀಸರ್‌ರಿಂದ ಪತ್ರ ಬಂದಿದೆ. ಪ್ರಾವಲ್ ಚಾನಲ್ ಮುಖಾಂತರ ಕಳುಹಿಸಿ ಎಂದು ಬರೆದಿದ್ದಾರೆ. ಸಬ್ಸೀಕ್ವೆಂಟಾಗಿ ಕಮಿಟಿಯವರು ಅದನ್ನು ರ್ಯಾಟಿಫೈ ಮಾಡಿ ಬರೆದಿದ್ದಾರೆ. ಆದ್ದರಿಂದ ಅಲ್ಲಿ ಮಿಸ್ ಅಪ್ರೋಪ್ರಿಯೇಷನ್ ಏನೂ ಆಗಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಇರ್ರೆಗ್ಯುಲಾರಿಟಿ ಆಗಿದೆ.

SRI K. H. RANGANATH.—Irregularity is not misappropriation.

ಶ್ರೀ ಟಿ. ಎಂ. ಮಂಜುನಾಥ್.—ಮಿಸ್‌ಅಪ್ರೋಪ್ರಿಯೇಷನ್ ಮತ್ತು ಇರೆಗ್ಯುಲಾರಿಟಿ ಎರಡೂ ಆಗಿದೆ.

SRI K. H. RANGANATH.—You are making allegation against the persons who are not in a position to defend themselves. Misappropriation is an offence, but irregularity is no offence.

ಶ್ರೀ ಟಿ. ಎಂ. ಮಂಜುನಾಥ್.—ಅವನು ಯಾರೇ ಆಗಿರಬಹುದು. ನಮಗೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ದುರ್ವ್ಯವಹಾರ ನಡೆದಿದೆ ಎಂಬ ಪದವನ್ನು ಬಳಸಿದ್ದಾರೆ. ಹಣ ದುರುಪಯೋಗ ಮಾಡಿದ್ದಾರೆಂದು ಹೇಳಿದ್ದಾರೆ. It is a serious allegation. It is not an offence.

ಮಾನ್ಯ ಸದಸ್ಯರು, ಛೇರ್ಮನ್‌ರವರು ಮತ್ತು ಇತರರು ದುರ್ವ್ಯವಹಾರ ಮಾಡಿದ್ದಾರೆಂದು ಹೇಳಿದರು. ೫ ಲಕ್ಷದ ೧೫ ಸಾವಿರದ್ದರೂಪಾಯಿಗಳು ದುರ್‌ವಿನಿಯೋಗವಾಗಿದೆಯೆಂದು ಗವರ್ನ ಸೆಳೆಯುವ ಸೂಚನೆಯಲ್ಲೂ ತಿಳಿಸಿದ್ದಾರೆ. ಇದು ಸಾಧಾರಣವಾದ ಅಲಿಗೇಷನ್ ಅಲ್ಲ. ಆದುದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆ ರೀತಿಯ ಯಾವ ವಿಧವಾದಂಥ ದುರ್‌ವಿನಿಯೋಗವಾಗಲೀ ಆಥವಾ ದುರ್ವ್ಯವಹಾರವಾಗಲೀ ಆಗಿಲ್ಲ. ೧೮ ಪರ್ಸೆಂಟ್ ಬಡ್ಡಿ ಕರ್ನಾಟಕ ಬ್ಯಾಂಕ್‌ನಲ್ಲಿ ಬರುತ್ತದೆ ಎನ್ನತಕ್ಕಂಥ ಉದ್ದೇಶದಿಂದ ಅವರು ಚಾಯಿಂಟ್ ಮಾರ್ಕೆಟಿಂಗ್ ಆಫೀಸರ್‌ರವರಿಗೆ ಪರ್ಮಿಷನ್‌ಗೋಸ್ಕರವಾಗಿ ಪತ್ರವ್ಯವಹಾರ ಬರೆದಿದ್ದಾರೆ. ಆದರೆ ಅವರಿಂದ ಪರ್ಮಿಷನ್ ಬರುವುದಕಿಂತ ಮುಂಚಿತವಾಗಿ ಅವರು ಆ ಹಣವನ್ನು ಕರ್ನಾಟಕ ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆಯೇ ವಿನಃ ಮತ್ತೆ ಇನ್ನು ಯಾವುದೇ ತರಹದ ದುರ್ವ್ಯವಹಾರವಾಗಿಲ್ಲ, ಮಾನ್ಯ ಸದಸ್ಯರು ಹೇಳುವ ಹಾಗೆ ಯಾವುದೇ ಮಿಸ್ ಅಪ್ರಾಪ್ರಿಯೇಷನ್ ಆಗಿಲ್ಲ. ಇದೇ ಒಂದು ಸಣ್ಣ ಇರ್‌ರೆಗ್ಯುಲಾರಿಟೀಸ್ ಆಗಿರತಕ್ಕಂಥದ್ದು.

ಶ್ರೀ ಟಿ. ಎಂ. ಮಂಜುನಾಥ್.—೨೦ ಲಕ್ಷ ರೂಪಾಯಿ ಹಣ ಸರ್‌ಪ್ಲಸ್ ಇತ್ತು ಎಂದು ತಾವು ಹೇಳುತ್ತೀರಿ. ದಯವಿಟ್ಟು ಸ್ಟೇಟ್‌ಮೆಂಟ್ ತರಿಸಿ ನೋಡಿ. ಇವತ್ತು ಬೇರೆ ಬ್ಯಾಂಕಿನಲ್ಲಿ ಹಣವನ್ನಿಡುವುದಕ್ಕಿಂತ ಮುಂಚೆ ಸಾಮಾನ್ಯವಾಗಿ ನಾವು ಈ ರೀತಿ ಫಿಕ್ಸೆಡ್ ಡಿಪಾಜಿಟ್ ಹಣವನ್ನಿಡುತ್ತೇವೆ ಎಷ್ಟು ಪರ್ಸೆಂಟೇಜ್ ಬಡ್ಡಿಯನ್ನು ಕೊಡುತ್ತೀರಿ ಎಂದು ನ್ಯಾಶನಲೈಜ್ ಬ್ಯಾಂಕ್‌ಗಳಾದ ಸಿಂಡಿಕೇಟ್ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್‌ನವರೊಡನೆ ಏನಾದರೂ ಅವರು ವ್ಯವಹರಿಸಿದ್ದಾರೆಯೇ ? ನನಗೆ ಗೊತ್ತಿರ ತಕ್ಕಂತೆ ಯಾವುದೋ ಒಂದು ಸತ್ಯಾಂಶವನ್ನು ಮುಚ್ಚಿಡುವುದಕ್ಕೋಸ್ಕರ ತಾವು ಈ ರೀತಿ ಹೇಳುತ್ತಿದ್ದೀರಿ.

SRI K. H. RANGANATH.—I take objection to this. I am really sorry. Madam Speaker, I have not kept back any information from this House. I have said there are some 20 lakhs of rupees surplus. ಮಾನ್ಯ ಸದಸ್ಯರು ಮಾತನಾಡುವಾಗ ಸ್ವಲ್ಪ ಯೋಚನೆ ಮಾಡಿ ಮಾತನಾಡಬೇಕು. These are the

matters which will have to be taken into considration. ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಅವರು ಬೇರೆ ಬ್ಯಾಂಕ್‌ಗಳವರನ್ನು ವಿಚಾರಿಸಿ ಹಣವನ್ನು ಇಡಬೇಕಾಗಿತ್ತು ಎಂದು ಹೇಳಿದರು. ಆದರೆ ಇವತ್ತು ಕರ್ನಾಟಕ ಬ್ಯಾಂಕ್‌ನಲ್ಲಿಯೇ ಹಣವಿರುವುದರಿಂದ, ಹಣ ಸೇನೂ ದುರ್ವಿನಿಯೋಗವಾಗಿಲ್ಲ, ಆದರಿಂದ ಬಡ್ಡಿ ಬರುವುದರಲ್ಲಿ ಏನಾದರೂ ತೊಂದರೆಯಾಗುತ್ತಿದೆಯೇ ? ಸಿಂಡಿಕೇಟ್ ಬ್ಯಾಂಕ್ ಮತ್ತು ಮೈಸೂರು ಬ್ಯಾಂಕ್, ಮತ್ತಿತರ ಬ್ಯಾಂಕ್‌ಗಳಲ್ಲಿ ಇಟ್ಟರೆ ಏನು ಬಡ್ಡಿಯನ್ನು ಕೊಡುತ್ತಾರೆ ಎಂಬುದನ್ನು ವಿಚಾರಿಸದೇ ಇರುವುದು ಅವರ ಒಂದು ಸಣ್ಣ ತಪ್ಪು, ಆದರೆ ಮಾನ್ಯ ಸಸ್ಯರು ಇಂಥ ಒಂದು ಸಣ್ಣ ತಪ್ಪುಗೋಸ್ಕರ ಅಂಥ ದೊಡ್ಡ ದೊಡ್ಡ ಪದಗಳನ್ನು ಉಪಯೋಗ ಮಾಡಬಾರದು

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಅವರು ಕಮಿಟಿಯ ಸದಸ್ಯರ ಅಭಿಪ್ರಾಯವನ್ನೇ ಕೇಳಿಲ್ಲ. ೩೦ನೇ ತಾರೀಖು ಚೆಕ್ಕನ್ನು ತೆಗೆದುಕೊಂಡು ಹೋಗಿ ಛೇರ್ಮನ್ ರವರ ಹತ್ತಿರ ಸೈನ್ ಮಾಡಿಸಿದ್ದಾರೆ ಇದಕ್ಕೆ ಕಾರಣ ಕರ್ನಾಟಕ ಬ್ಯಾಂಕ್‌ನಲ್ಲಿ ಹಣವನ್ನು ಡಿಪಾಜಿಟ್ ಮಾಡಿ ಆಮೇಲೆ ಅವರಿಂದ ಸಾಲ ಪಡೆಯಂವುದಕ್ಕೋಸ್ಕರ ಅಧ್ಯಕ್ಷರು ಮತ್ತು ಕೆಲವು ಸದಸ್ಯರುಗಳು ಸೇರಿ ಈ ರೀತಿ ಮಾಡಿದ್ದಾರೆ. ಆಮೇಲೆ ತಾವು ಕೊಟ್ಟಂಥ ಪ್ರಾಮಿಸ್ಸರಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಸಾರ್ವಜನಿಕರ ಹಣವನ್ನು ತೆಗೆದುಕೊಂಡು ಹೋಗಿ ಕರ್ನಾಟಕ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಿದ್ದಾರೆ ಇದರಿಂದ ಹಣವನ್ನು ದುರುಪಯೋಗಮಾಡಿಕೊಂಡ ಹಾಗೆ ಆಗಲಿಲ್ಲವೇ ? ಅಕ್ರಮವಾಗಿ ದುರ್ವ್ಯವಹಾರ ಮಾಡಿದ ಹಾಗೆ ಆಗಲಿಲ್ಲವೇ ?

SRI K. H. RANGANATH.—Money is there in the bank. I am really sorry. My friend is misusing the privilege.

ಶ್ರೀ ಟಿ ಎಂ. ಮಂಜುನಾಥ್.—ತಾವು ರೂಲ್ಸ್ ಬೈಲಾಸ್‌ನ್ನು ತೆಗೆದುಕೊಂಡು ನೋಡಿ. ೫ ಲಕ್ಷದ ೧೫ ಸಾವಿರ ರೂಪಾಯಿಗಳ ಚೆಕ್‌ಗೆ ಸೈನ್ ಮಾಡಬೇಕಾದರೆ ರೂಲ್ಸ್ ಬೈಲಾಸ್ ಪ್ರಕಾರ ಅಧ್ಯಕ್ಷರು ಕಮಿಟಿಯ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ ಅವರು ರೂಲ್ಸ್ ಬೈಲಾಸ್‌ಗೆ ವಿರುದ್ಧವಾಗಿ ಮಾಡಿರುವುದರಿಂದ ಇದಕ್ಕೆ ಯಾರು ಯಾರು ಸಂಬಂಧಪಟ್ಟಿದ್ದಾರೋ ಅವರ ಮೇಲೆ ಉಗ್ರವಾಗಿ ಕ್ರಮ ತೆಗೆದುಕೊಂಡು ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡುತ್ತೀರಾ ?

SRI K H. RANGANATH.—I am not going to supersede the Society. The committee has not done any offence. After all, it is an omission on the part of the officers which can just be overlooked.

PAPERS LAID ON THE TABLE

SRI H. M. CHANNABASAPPA.—On behalf of the Chief Minister I lay

The Ninth Annual Report of the Karnataka State Vigilance Commission together with Memorandum for the year 1973-74 under rule (7) of the Karnataka Vigilance Commission Rules, 1963.

MADAM SPEAKER.—The Paper is laid.

Objection to move the Public Wakfs (Extension of Limitation) Karnataka Amendment Bill 1976.

MADAM SPEAKER.—The Minister for Agriculture may move the Wakfs Bill.

SRI M. S. KRISHNAN.—I take objection.

ಅಧ್ಯಕ್ಷರು.—ಇದರಲ್ಲಿ ಸಿಂಪಲ್ ಅಮೆಂಡ್‌ಮೆಂಟ್ ಇದೆ. ಅದು ಬಿಟ್ಟು ಇದರಲ್ಲಿ ಮಂತ್ರಿ ಏನಿದೆ ?